ಇ) ಕರ್ನಾಟಕ ಎಲ್ಲಾ ಜಿಲ್ಲೆಗಳೂ ಈ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುತ್ತವೆ

ಈ) 157 27 ಎಕರೆಗಳು

ಉ) ಸಾಂಕೇತಿಕವಾಗಿ ಸಹಾಯಧನವನ್ನು ಕಾಯ್ದಿರಿಸಲಾಗಿದ್ದು ಅದು ಬಿಡುಗಡೆಗೊಂಡಿರುವುದಿಲ್ಲ

ಊ) ರೂ 2 00 ಕೋಟಿ ಯೋಜನೆಯಡಿಯಲ್ಲಿ

ಋ) ಡಾ॥ ಎಸ್ ಸುಬ್ರಮಣ್ಯ, ಇವರನ್ನು ವಿಶೇಷ ಕರ್ತವ್ಯಾಧಿಕಾರಿಯನ್ನಾಗಿ ನೇಮಿಸಲಾಗಿದೆ

ೠ) ಕರ್ನಾಟಕ ಪಶು ವೈದ್ಯ, ಪಶು ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯ ಸ್ಥಾಪನೆಯ ಬಗ್ಗೆ ಅಂತಿಮ ವರದಿಯನ್ನು ನೀಡಿರುವರು ಕರ್ನಾಟಕ ಪಶು ವೈದ್ಯ, ಪಶು ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯ ಅಧಿನಿಯಮವು ದಿನಾಂಕ 28–02–2004ರಿಂದ ಜಾರಿಗೆ ಬಂದಿರುತ್ತದೆ

ಕುಲಪತಿಯ ನೇಮಕಾತಿಯು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ ಕುಲಪತಿಗಳ ನೇಮಕಾತಿ ನಂತರ ವಿಶ್ವವಿದ್ಯಾನಿಲಯವು ಪೂರ್ಣ ಪ್ರಮಾಣದ ಕಾರ್ಯನಿರ್ವಹಿಸುವುದು

464(449) ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ (ಹುಬ್ಬಳ್ಳಿ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಹುಬ್ಬಳ್ಳಿ ಬಸವೇಶ್ವರ ಮಾರುಕಟ್ಟೆಯ (ಎಪಿಎಂಸಿ) ವರ್ತಕರು ಆರ್ಥಿಕ ತೊಂದರೆ ಅನುಭವಿಸುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಎ ಪಿ ಎಂ ಸಿ ಅಮರಗೋಳ ಹುಬ್ಬಳ್ಳಿಯಲ್ಲಿನ ವರ್ತಕರಿಗೆ ಯಾವ ಯಾವ ತರಹದ ಆರ್ಥಿಕ ನೆರವು ನೀಡಲು ಸರ್ಕಾರ ಯೋಜಿಸಿದೆ

ಇ) ವರ್ತಕರ ತೊಂದರೆ ಹೋಗಲಾಡಿಸಲು ಸರ್ಕಾರ ಕೈಗೊಂಡ ಕ್ರಮವೇನು

ಶ್ರೀ ಪ್ರಕಾಶ್ ಬಿ ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು)

ಅ) ಇಲ್ಲ

ಆ) ಪ್ರಶ್ನೆ ಉದ್ಭವಿಸುವುದಿಲ್ಲ

ಇ) ಪ್ರಶ್ನೆ ಉದ್ಭವಿಸುವುದಿಲ್ಲ

467(554) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಸಿ ಇ ಟಿ ಸೀಟು ಹಂಚಿಕೆ ಮತ್ತು ಫೀ ನಿಗದಿ ಬಗ್ಗೆ ಸರ್ಕಾರ ಮತ್ತು ಆಡಳಿತ ಮಂಡಳಿಗಳ ನಡುವೆ ಯಾವುದೇ ಒಂದು ನಿರ್ದಿಷ್ಟ ನೀತಿ ನಿರೂಪಣೆ ಆಗದೆ ಇರುವುದರಿಂದ ರಾಜ್ಯದ ವಿದ್ಯಾರ್ಥಿಗಳು ಮತ್ತು ಪಾಲಕರ ಗೊಂದಲದಲ್ಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ

ಆ) ಬಂದಿದ್ದಲ್ಲಿ ಈ ಗೊಂದಲ ನಿವಾರಣೆಗೆ ಸರ್ಕಾರ ಕೈಗೊಂಡ ಕ್ರಮಗಳೇನು

ಇ) ಸಿ ಇ ಟಿ ಬಗ್ಗೆ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪುಗಳ ರೀತಿಯಲ್ಲಿ ಅನುಷ್ಠಾನ ಮಾಡುವಲ್ಲಿ ಸರ್ಕಾರಕ್ಕೆ ಇರುವ ತೊಂದರೆಗಳೇನು

ಈ) ಇದ್ದಲ್ಲಿ, ಸುಪ್ರೀಂ ಕೋರ್ಟ್‌ನಲ್ಲಿ ತೀರ್ಪಿನ ಕುರಿತು ಪುನಃ ಪರಿಶೀಲನಾ ಅರ್ಜಿ ಸಲ್ಲಿಸಲಾಗಿದೆಯೆ?

ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)

ಅ) ಬಂದಿದೆ

ಆ) ಅಧಿಕಾರಿಗಳ ಸಮಿತಿಯು ಆಡಳಿತ ಮಂಡಳಿಗಳ ಪದಾಧಿಕಾರಿಗಳೊಂದಿಗೆ ಚರ್ಚಿಸಿದೆ ಸಚಿವ ಸಂಪುಟ ಉಪ ಸಮಿತಿಯೂ ಸಹ ಹಲವು ಬಾರಿ ಸಭೆ ಸೇರಿ ಸಮಸ್ಯೆ ನಿವಾರಣೆಗೆ ಮಾರ್ಗೋಪಾಯಗಳನ್ನು ಕಂಡು ಹಿಡಿಯಲು ಪ್ರಯತ್ನಿಸಿದೆ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಆಡಳಿತ ಮಂಡಳಿಗಳ ಪ್ರತಿನಿಧಿಗಳೊಂದಿಗೆ ಮೂರು ಭಾರಿ ಸಭೆ ನಡೆಸಲಾಗಿದೆ. ಸಮಸ್ಯೆಯ ನಿವಾರಣೆಗೋಸ್ಕರ 2004–05ನೇ ಸಾಲಿಗೆ ಪ್ರವೇಶಾತಿ ಬಗ್ಗೆ ಶಾಸನ ತರಲಾಗುತ್ತಿದೆ

ಇ) ಸರ್ವೋಚ್ಚ ನ್ಯಾಯಾಲಯವು ನೀಡಿರುವ ತೀರ್ಪಿನನ್ವಯ ಎಲ್ಲ ವಿದ್ಯಾರ್ಥಿಗಳೂ ಒಂದೇ ರೀತಿಯ ಶುಲ್ಕ ನೀಡಿ ಪ್ರವೇಶಾತಿ ಪಡೆಯಬೇಕಾಗಿರುತ್ತದೆ ಇದರಿಂದ ಸರ್ಕಾರಿ ಕೋಟಾಕ್ಕೂ ಶುಲ್ಕ ಹೆಚ್ಚಾಗಿರುತ್ತದೆ ಹೀಗೆ ಶುಲ್ಕ ಭರಿಸಲು ಶಕ್ತಿಯಿಲ್ಲದ ವಿದ್ಯಾರ್ಥಿಗಳು ಸೀಟು ಪಡೆದು ಉನ್ನತ ಶಿಕ್ಷಣ ಪಡೆಯಲು ಸಾಧ್ಯವಾಗುವುದಿಲ್ಲ ಇಂತಹ ಸಮಸ್ಯೆಗಳಿವೆ

ಈ) 2003–2004ನೇ ಶೈಕ್ಷಣಿಕ ವರ್ಷದಲ್ಲಿ ಅನುಸರಿಸಲಾದ ಸೀಟು ಹಂಚಿಕೆ ಮತ್ತು ಶುಲ್ಕ ರಚನೆಯನ್ನು ಅನುಸರಿಸಲು ಅನುಮತಿ ಕೋರಿ ರಾಜ್ಯ ಸರ್ಕಾರವು ಭಾರತ ಸರ್ವೋಚ್ಚ ನ್ಯಾಯಾಲಯದಲ್ಲಿ ಐ ಎ ಸಲ್ಲಿಸಿದೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ 15–07–2004ರ ತನ್ನ ಆದೇಶದಲ್ಲಿ ಕೋಟಾವು 50:50 ಇರತಕ್ಕದೆಂದು ನಿಗದಿಪಡಿಸಿದೆ ಈಗ ಶುಲ್ಕ ನಿಗದಿ ಸಮಿತಿಯ ಪ್ರವೇಶಾತಿಗೆ ನಿಗದಿಪಡಿಸಿರುವ ಶುಲ್ಕವೇ ಕಡಿಮೆಯೆಂದು ಹಲವಾರು ಆಡಳಿತ ಮಂಡಳಿಗಳು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್‌ಗಳನ್ನು ದಾಖಲ್ಮಾಡಿದ್ದು ಅವು ಬಾಕಿ ಇರುತ್ತದೆ

469(194) ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

a) The Courses being run at R C Commerce College, Bangalore,

b) Number of students studying in this college,

c) The amount spent on purchase of books and providing other infrastructural facilities in this college during 2003-04,

d) Whether any construction work has been taken up during 2002-03 and 2003-04,

e) If yes, the details of the progress of work be furnished?

ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)

ಅ) ಬಿ ಕಾಂ., ಬಿ ಬಿ ಎಂ , ಎಂ ಕಾಂ., ಎಂ ಬಿ ಎ ,

ಆ) 1366

ಇ) 2003–04ನೇ ಸಾಲಿಗೆ ಬಿಡುಗಡೆಯಾದ ಅನುದಾನದಲ್ಲಿ ರೂ 40,000/–ಗಳನ್ನು ಪುಸ್ತಕ ಖರೀದಿಗೆ ವೆಚ್ಚ ಮಾಡಲಾಗಿರುತ್ತದೆ ಹಾಗೂ 2003–04ನೇ ಸಾಲಿಗೆ ಮೂಲ ಸೌಕರ್ಯಗಳನ್ನು ಒದಗಿಸುವ ಸಲುವಾಗಿ ಯಾವುದೇ ವೆಚ್ಚವನ್ನು ಭರಿಸಿರುವುದಿಲ್ಲ

ಈ) ಹೌದು

ಉ) ಕಾಮಗಾರಿಯ ಪ್ರಗತಿಯ ಬಗ್ಗೆ ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ